

ಎಂದು ವಿಚಾರಿಸಿದಳು. 'ಯಾಕೆ?' ಆಶ್ಚರ್ಯದಲ್ಲಿ ಕೇಳಿದೆ. 'ದಿನಾ ಆಫೀಸಿಗೆ ಬಂದು ಹೋಗುದ್ರಲ್ಲೇ ಸಮಯ ಕಳೀತದೆ. ಹಾಸ್ಟೆಲ್ ಹತ್ರವೇ ಇದ್ರೆ ಕೋರ್ಸ್ ಮಾಡಲು ಅನುಕೂಲ' ಎಂದಳು. ಆಕೆ ದೂರದಿಂದ ಬರುತ್ತಿರುವುದು ತಿಳಿದಿತ್ತು. ಅವಳ ಸದುದ್ದೇಶಕ್ಕೆ ಸಹಕಾರ ನೀಡುವುದು ಉಪಕಾರವಲ್ಲ ಕರ್ತವ್ಯ ಅನ್ನಿಸಿತು. ಜಿ.ಎಂ ಹತ್ತಿರ ಮಾತನಾಡಿ ಹಾಸ್ಟೆಲ್ ಸಮೀಪದ ಪ್ರಾದೇಶಿಕ ಕಚೇರಿಗೆ ಟ್ರಾನ್ಸ್‌ಫರ್ ಕೊಡಿಸಲು ಕಷ್ಟವೇನೂ ಆಗಲಿಲ್ಲ. ಅವಳಿಗೆ ಟ್ರಾನ್ಸ್‌ಫರ್ ದೊರೆತ ಕೂಡಲೇ 'ನಾವೆಲ್ಲಾ ಎಷ್ಟು ಒದ್ದಾಡಿದರೂ ಬೇಕಾದ ಕಡೆ ಟ್ರಾನ್ಸ್‌ಫರ್ ಸಿಗುವುದಿಲ್ಲ, ಕೆಲವರು ಹೇಗೋ ಮಾಡಿಕೊಳ್ಳುತ್ತಾರೆ' ಎನ್ನುವ ಕುಹಕದ ಮಾತುಗಳನ್ನು ನಾನು ಕೇಳ ಬೇಕಾಯಿತು.

***

ಚೈತ್ರಾ ಪ್ರಾದೇಶಿಕ ಕಚೇರಿಗೆ ಸೇರಿದ ಕೆಲವು ದಿನಗಳಲ್ಲೇ ಪಿಜಿ ಕೋರ್ಸ್‌ಗೆ ಸೇರಿಕೊಂಡಿದ್ದೇನೆಂದು ತಿಳಿಸಿದಳು. ಲರ್ನಿಂಗ್ ಸೆಂಟರ್ ಹತ್ತಿರದಲ್ಲಿದ್ದು ಸಂಜೆ ಹಾಸ್ಟೆಲ್‌ನಿಂದ ನಡೆದುಕೊಂಡೇ ಹೋಗುತ್ತೇನೆಂದು ಹೇಳಿದ್ದಳು. 'ಒಬ್ಬಳೇ ಹೇಗೆ ಹೋಗುತ್ತೀಯಾ' ಎಂದು ಕೇಳಿದಾಗ, 'ಸೆಂಟರ್‌ನಲ್ಲಿ ಒಬ್ಬನ ಪರಿಚಯವಾಗಿದೆ ಅವನೂ ನಮ್ಮ ಹಾಸ್ಟೆಲ್‌ನಲ್ಲಿದ್ದಾನೆ. ಇಬ್ಬರೂ ಜತೆಯಾಗಿಯೇ ಹೋಗಿ ಬರುತ್ತೇವೆ' ಎಂದಿದ್ದಳು.

ಒಮ್ಮೆ ಪ್ರಾದೇಶಿಕ ಕಚೇರಿಗೆ ಹೋದಾಗ ರೀಜನಲ್ ಮ್ಯಾನೇಜರ್ 'ನಿಮ್ಮ ಕ್ಯಾಂಡಿಡೇಟ್ ಪರವಾಗಿಲ್ಲ. ಚೆನ್ನಾಗಿ ಕೆಲಸ ಮಾಡುತ್ತಾರೆ' ಎಂದು ಹೊಗಳಿದ್ದರು. 'ಅವಳು ನನ್ನ ಕ್ಯಾಂಡಿಡೇಟ್ ಅಲ್ಲ, ಅವಳ ಮೊದಲ ನೌಕರಿ ನಾನಿರುವ ಬ್ರಾಂಚಲ್ಲಿ, ಅಷ್ಟೇ' ಎಂದವರನ್ನು